ಶ್ರೀ ಭೀಮಣ್ಣ ಖಂಡ್ರೆ.—೯ ತಿಂಗಳು ಡಿಲೇ ಆಗಬೇಕಾದರೆ ಅಲ್ಲಿನ ಕೆಪಾಸಿಟಿ ಎಷ್ಟಿತ್ತು ಎಂಬುದನ್ನು ಹೇಳಬೇಕಲ್ಲ. ನಾನು ಪ್ರಶ್ನೆ ಹಾಕಿ ಒಂದು ವರ್ಷದ ನಂತರ ಈ ಉತ್ತರ ಬರುತ್ತಿದೆ. ಪ್ರತಿ ತಿಂಗಳು ಎಷ್ಟು ಕೇಸ್‌ಗಳ ಬಗ್ಗೆ ಪರೀಕ್ಷೆ ಮಾಡುತ್ತಾರೆ ಎಂಬ ಬಗ್ಗೆ ಉತ್ತರ ಹೇಳಬಹುದಲ್ಲ. ೧೦, ೨೦, ೩೦ ಹೀಗೆ ಎಷ್ಟು ಕೇಸ್‌ಗಳನ್ನು ಪರೀಕ್ಷೆ ಮಾಡಿ ಪ್ರತಿ ತಿಂಗಳು ಕಳುಹಿಸುತ್ತಾರೆ. ಇದು ೯ ತಿಂಗಳು ಉಳಿಯಲು ಕಾರಣವೇನು ಎಂಬುದನ್ನು ತಿಳಿಸಿ. ಅನಾವಶ್ಯಕವಾಗಿ ೯ ತಿಂಗಳು ತಡ ಮಾಡಿದ್ದಾರೆ ಎಂಬ ಶಂಕೆ ಇದೆ. ಆದ್ದರಿಂದ ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್.—ಹಾಗೇನೂ ಮಾಡಿಲ್ಲ. ಸರಿಯಾದ ರಿಪೋರ್ಟ್ ಕೊಟ್ಟಿದ್ದಾರೆ. ಯಾವ ತರಹದ ಮುಚ್ಚಳಿಕೆಯನ್ನೂ ಮಾಡಿಲ್ಲ. ಏನನ್ನೂ ಮುಚ್ಚಿಟ್ಟುಕೊಂಡಿಲ್ಲ. ಮುಂದೆ ಹಾಗೆ ತಡವಾಗದಂತೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ಇಲ್ಲಿ ಕೇಸುಗಳ ಪರೀಕ್ಷೆ ಮಾಡುವುದು ತಡವಾಗುತ್ತದೆ ಎಂದು ತಿಳಿದುಕೊಂಡು ಪೋಲೀಸರೇ ಎಷ್ಟೋ ಕೇಸುಗಳನ್ನು ವಾಪಸ್ ತರಿಸಿಕೊಂಡು ಹೈದರಾಬಾದಿಗೆ ಕಳುಹಿಸಿ ಪರೀಕ್ಷೆ ಮಾಡಿಸಿದ್ದಾರೆ. ಅಲ್ಲಿಂದ ೮ ದಿವಸಗಳಲ್ಲಿ ಉತ್ತರ ಬರುತ್ತದೆ. ಆದರೆ ಇಲ್ಲಿ ೯ ತಿಂಗಳು ಡಿಲೇ ಏತಕ್ಕೆ ಆಯಿತು ?

ಶ್ರೀ ಧರ್ಮಸಿಂಗ್.—ಡಿಲೇ ಏತಕ್ಕೆ ಆಯಿತು ಎಂಬ ಬಗ್ಗೆ ಈಗಾಗಲೇ ಹೇಳಿದ್ದೇನೆ. ಬೇರೆ ಯಾವ ಕಾರಣವೂ ಇಲ್ಲ. ಆ ಬಗ್ಗೆ ಕ್ರಮವನ್ನೂ ತೆಗೆದುಕೊಳ್ಳಲಾಗಿದೆ.

Starting of Lift Irrigation Schemes in Afzalpur Taluk.

706 SRI M. Y. PATIL (Afzalpur)—Will the Minister for Transport and Minor Irrigation be pleased to state.—

(a) whether it has come to the notice of Government that the work has not commenced yet, though the Lift Irrigation Scheme had been sanctioned in Mannur and Devala Ghanaghapur of Afzalpur taluk ;

(b) if so, the reasons for the delay ;

(c) whether the Government would commence this work during this year itself ?

SRI M. M. J. SADYOJATHA (Minister for Transport and Minor Irrigation)

(a) (i) The matter is still under investigation;

(ii) Estimates are being prepared.

(b) Does not arise in view of reply furnished to Clause

(a) above

(c) No

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಘಾಣಗಾಪುರ ಮತ್ತು ಮಣ್ಣೂರು ಗ್ರಾಮದಲ್ಲಿ ಏತನೀರಾವರಿ ಯೋಜನೆ ಸ್ಯಾಂಕ್ಷನ್ ಆಗಿಲ್ಲ ಎಂದು ತಿಳಿಸಿದ್ದಾರೆ. ಆದರೆ ಎರಡು ವರ್ಷದಿಂದ ಬಜೆಟ್ ಪುಸ್ತಕದಲ್ಲಿ ಇದು ಬರುತ್ತಿದೆ. ಮಾನ್ಯ ಮಂತ್ರಿಗಳು ಬಜೆಟ್ ಪುಸ್ತಕವನ್ನು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆ ಯೋಜನೆ ಸ್ಯಾಂಕ್ಷನ್ ಆಗಿದೆ. ಆದರೆ ಕೆಲಸ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಬಜೆಟ್ ಪುಸ್ತಕದಲ್ಲಿ ಬಂದಿರಬಹುದು. ಆದರೆ ಆದು not feasible ಎಂದು ಕೈಬಿಡಲಾಗಿದೆ.

ಶ್ರೀ ಎಂ. ವೈ. ಪಾಟೀಲ್—ಫೀಸಿಬಲ್ ಇದೆ ಎಂದು ಎರಡು ವರ್ಷದಿಂದ ಬಜೆಟ್ ಪುಸ್ತಕದಲ್ಲಿ ಬಂದಿದೆ. ಇವತ್ತು ಫೀಸಿಬಲ್ ಇಲ್ಲ ಎಂದು ಹೇಳುತ್ತಿದ್ದೀರಿ. ಈಗಾಗಲೇ ಈ ಯೋಜನೆ ಮುಂಜೂರಾಗಿ ಬಜೆಟ್ ಪುಸ್ತಕದಲ್ಲಿ ಬರುತ್ತಿದೆ, ಆದರೆ ಕೆಲಸ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಕೇಳಿದರೆ ಈಗ ಫೀಸಿಬಲ್ ಇಲ್ಲ ಎಂದು ಹೇಳುತ್ತೀರಿ. ಆದರೆ ಬರವಣಿಗೆಯ ಉತ್ತರದಲ್ಲಿ ಅದಿನ್ನೂ ತನಿಖೆಯಲ್ಲಿದೆ ಎಂದು ಹೇಳಿದ್ದೀರಿ. ಒಂದಕ್ಕೊಂದು ತಾರತಮ್ಯ ಇದೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇನ್‌ವೆಸ್ಟಿಗೇಷನ್ ಮಾಡಿದನಂತರವೇ ಫೀಸಿಬಲ್ ಇಲ್ಲ ಎಂದು ಉತ್ತರ ಕೊಟ್ಟಿರುವುದು.

ಅಧ್ಯಕ್ಷರು.—ನೀವಿಬ್ಬರೂ ಆಮೇಲೆ ಕುಳಿತುಕೊಂಡು ಬೇಕಾದರೆ ಮಾತನಾಡಿ.

Construction of bridge across Nandini River, Karkala Taluk

744 SRI. DAMODAR MULKY, (Mudabidri)--Will the Minister for Public Works be pleased to state.

(a) whether it is not a fact that the construction of a bridge over Nandini river at Aswathapura, Karkala Taluk. D. K. District was sanctioned during 1979 to complete the missing link in the Aswathapura Ganjimata P. W. D. Road.

(b) whether it is a fact that the same was cancelled and if so, when it was cancelled and the reasons for the cancellation.

SRI KAGODU THIMMAPPA (Minister for Public Works.—

(a) This was included in the 2 crores programme of works approved in G. O. No. PWD 219 CRM 79 dated 3rd December 1979.

(b) The road was deleted subsequently due to paucity of funds.

ಶ್ರೀ ದಾಮೋದರ ಮುಲ್ಕಿ.—ಸ್ಪಾವಿ, ಹಣದ ಕೊರತೆಯಿಂದ ಸದರಿ ರಸ್ತೆಯನ್ನು ಕೈಬಿಡಲಾಗಿದೆಯೆಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ೨ ಕ್ರೋರ್ಸ್‌ಪ್ರೋಗ್ರಾಮ್‌ನಲ್ಲಿ ಎಷ್ಟು ಕೆಲಸವನ್ನು ಹಣದ ಅಭಾವದಿಂದ ಕೈಬಿಡಲಾಗಿದೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ (ಸಾರಿಗೆ ಸಚಿವರು) (ಲೊಕೋಪಯೋಗಿ ಖಾತೆ ಮಂತ್ರಿಗಳ ಪರವಾಗಿ).—ಆ ವಿವರ ನನ್ನ ಹತ್ತಿರ ಇಲ್ಲ ಈ ಕೆಲಸವನ್ನು ಮತ್ತೆ ಎಸ್ಟಿಮೇಟ್ ಮಾಡಲಾಗಿದೆ. ಸುಮಾರು ೪.೭೧ ಲಕ್ಷಕ್ಕೆ ಎಸ್ಟಿಮೇಟ್ ಆಗಿದ್ದು ಹಣದ ಪರಿಸ್ಥಿತಿ ಸುಧಾರಿಸಿದ ನೋಲೆ ತಕ್ಷಣ ಈ ಕೆಲಸವನ್ನು ತೆಗೆದುಕೊಳ್ಳಲಾಗುವುದು

ಶ್ರೀ ದಾಮೋದರ ಮುಲ್ಕಿ.—ಒಂದೊಂದು ಬ್ಲಾಕ್‌ಗೆ ಎರಡೆರಡು ಕೆಲಸಗಳನ್ನು ತೆಗೆದುಕೊಂಡಿದ್ದೀರಿ. ನನ್ನ ದಕ್ಷಿಣ ಕನ್ನಡ ಜಿಲ್ಲೆಯ ಈ ಕೆಲಸವನ್ನೇ ಏಕೆ ಕೈಬಿಟ್ಟಿದ್ದೀರಿ ?

ಶ್ರೀ ಎಂ. ಎಂ. ಜೆ ಸದ್ಯೋಜಾತ.—ಆದನ್ನು ಕೈಬಿಟ್ಟಿದ್ದು ಈಗ ಮತ್ತೆ ತೆಗೆದುಕೊಳ್ಳಲಾಗಿದೆ. ೪.೭೧ ಲಕ್ಷಕ್ಕೆ ಎಸ್ಟಿಮೇಟ್ ಆಗಿದ್ದು ಹಣಕಾಸಿನ ಪರಿಸ್ಥಿತಿ ಸುಧಾರಿಸಿದ ತಕ್ಷಣ ತೆಗೆದುಕೊಳ್ಳಲಾಗುವುದು.